1. ಭಟ್ಕಳ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದಲ್ಲಿನ ಕಾರ್ಯ ನಿರ್ವಹಣಾಧಿಕಾರಿಯ ಹುದ್ದೆ ಎಂದಿನಿಂದ ಖಾಲಿ ಇದೆ.

2. ಈ ಹುದ್ದೆಯನ್ನು ಎಂದು ಭರ್ತಿ ಮಾಡಲಾಗುವುದು

3. ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿಯನ್ನು ಈ ಹುದ್ದೆಗೆ ಭರ್ತಿ ಮಾಡಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

1. 1998ರ ಸೆಪ್ಟೆಂಬರ್ ತಿಂಗಳಿನಿಂದ.

2. ಮುಂದಿನ ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ಭರ್ತಿ ಮಾಡಲಾಗುವುದು.

3. ಅಭಿವೃದ್ಧಿ ಇಲಾಖೆಯ ಹಾಗೂ ಇತರ ಇಲಾಖೆಗಳಿಂದ ಸಹ ಸೂಕ್ತ ಹಾಗೂ ಅರ್ಹ ಅಧಿಕಾರಿಗಳ ಸೇವೆಯನ್ನು ಪಡೆದು ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಹುದ್ದೆಗೆ ನೇಮಿಸಲಾಗುತ್ತಿದೆ.

ಭಟ್ಕಳ ಕ್ಷೇತ್ರದಲ್ಲಿ ಕಿರು ನೀರು ಸರಬರಾಜು ಯೋಜನೆಗಳು.

822(141) ಶ್ರೀ ಶಿವಾನಂದ ನಾಯಕ್ (ಭಟ್ಕಳ) ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 96-97, 97-98, 98-99 ರಲ್ಲಿ ಭಟ್ಕಳ ಕ್ಷೇತ್ರದಲ್ಲಿ ಕಿರು ನೀರು ಸರಬರಾಜು ಯೋಜನೆಗಳು ಮಂಜೂರಾದ ಸ್ಥಳಗಳು ಯಾವುವು?

ಆ) ಮಂಜೂರಾದ ಯೋಜನೆಗಳ ಪೈಕಿ ಪೂರ್ಣಗೊಂಡ ಯೋಜನೆಗಳು ಯಾವುವು?

ಇ) ಬಾಕಿ ಉಳಿದವುಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಅನುಬಂಧ - 1

ಅ) 1996-97, 97-98 ಮತ್ತು 98-99ನೇ ಸಾಲಿನಲ್ಲಿ ಭಟ್ಕಳ ಕ್ಷೇತ್ರಗಳಲ್ಲಿ ಮಂಜೂರಾದ ಕಿರುನೀರು ಸರಬರಾಜು ಯೋಜನೆಗಳು ಸ್ಥಳದ ವಿವರಗಳು:

1. ಹೊನ್ನಾವರ ತಾಲ್ಲೂಕು :—

1996-97 1. ತಾಳಮಕ್ಕಿ 2. ದಿಬ್ಬಣಗಳೆ 3. ತೋಟದ ಮನೆ ಅಪತೋಟ.

1997-98 1. ಸಂಕಿ ಹರಿಜನಕೇರಿ 2. ಹಡಿನಬಾಳ ಮಾಸ್ತಲಮಕ್ಕಿ 3. ಚಿಕ್ಕನಗೋಡು ಮುರ್ಡಾಗುಂಡವಾಳ. 4. ಮಂಕಿ ಕೆಪ್ಪನಹಿತ್ಲ ಸಣ್ಣಗುಂದ. 5. ಮನಕಿ ಕುಂಬಾರಕೇರಿ.

1998-99 ಯಾವುದೂ ಇಲ್ಲ.

2. ಭಟ್ಕಳ ತಾಲ್ಲೂಕು :—

1996-97 1. ಬಳೂರಮನೆ 2. ಕೋಣಾರ 3. ಯಲವಡಿಕಾವೂರ ಸರ್ಪನಕಟ್ಟಾ 4. ಕೋಡಿಸಾಳ 5. ಸಣ್ಣಭಾವಿ 6. ವೆಂಕಟಾಪುರ ಹಿಂದೂ ಕಾಲೋನಿ 7. ಕುಕನೀರ 8. ತಿಟ್ಟಿಹಿತ್ತಲ 9. ಬೆಳಾಲಖಂಡ 10. ದೊಡ್ಡಮನೆ 11. ಬೆಂಗ್ರೆ 2ನೇ ಹಂತ 12. ದೀವಗಿರಿ.

1997-98 1. ಶಿರಾಲೆ ಕೋಟೆಬಾಗಿಲ್ಲ 2. ಶಿರಾಲೆಯ ಹಂಪಿಕೇರಿ 3. ಕೈಕಿಣಿ ಕೆರೆಗದ್ದೆ 4. ಹಡಿಲ ಹಟ್ಟಿಮಕ್ಕಿ ಕೋಣಾರ 5. ಹೊನ್ನೆಗದ್ದೆ ಬೆಳ್ಕೆ.

1998-99 1. ಮುಟ್ಟಳ್ಳಿ 2. ಬೈಲೂರ ಸಣ್ಣಬಲನೆ 3. ಮಾವಳ್ಳಿ ಭೂಮನಹಕ್ಕಲ 4. ಮಾರುಕೇರಿ ಕೋಟಖಂಡ 5. ಬೈಲೂರ ಮಾರ್ಕಂಡೇಶ್ವರ 6. ವೆಂಕಟಾಪುರ ಫ್ಯಾಕ್ಟರಿ.

ಆ) ಪೂರ್ಣಗೊಂಡ ಯೋಜನೆಗಳು:—(1) ಹೊನ್ನಾವರ ತಾಲ್ಲೂಕು :—

1996-97 1. ತಾಳಮಕ್ಕಿ 2. ದಿಬ್ಬಣಗಲೆ 3. ತೋಟದಮನೆ ಅಪತೋಟ.

1997-98 1. ಹಡಿನಬಾಳ ಮಾತ್ತಲಮಕ್ಕಿ 3. ಚಿಕ್ಕನಗೋಡು ಮುರ್ಡಾಗುಂಡವಾಳ. 4. ಮಂಡಿ ಕೆಪ್ಪನಹಿತ್ಲ ಸಣ್ಣಗುಂದ.

2. ಭಟ್ಕಳ ತಾಲ್ಲೂಕು :—

1996-97 1. ಕೋಣಾರ 2. ಯಲವಡಿ ಕಾವ್ಯೂರಸರ್ಪನಕಟ್ಟ 3. ಕೋಡಿಸಾಳ 4. ಸಣ್ಣಭಾವಿ 5. ವೆಂಕಟಾಪುರ ಹಿಂದೂ ಕಾಲೋನಿ 6. ಕುಕನೀರ 7. ತಟಹಿತ್ತಲ 8. ಬೆಳಾಲಖಂಡ 9. ದೊಡ್ಡಬಳಸೆ 10. ಬೆಂಗ್ರೆ ಎರಡನೇ ಹಂತ 11. ದೀವಗಿರಿ.

ಇ) ಪ್ರಗತಿಯಲ್ಲಿರುವ : ಕೈಗೆತ್ತಿಕೊಳ್ಳಬೇಕಾದ ಯೋಜನೆಗಳು:—

1. ಹೊನ್ನಾವರ ತಾಲ್ಲೂಕು :—

1. ಸಲಕಿ ಹರಿಜನ ಕೇರಿ 2. ಮಂಕಿ ಕುಂಬಾರಕೇರಿ.

2. ಭಟ್ಕಳ ತಾಲ್ಲೂಕು :—

1996-97 1. ಬಳೂರಮನೆ 2. ಶಿರಾಲಿ ಕೋಟೆ ಬಾಗಿಲ್ 3. ಶಿರಾಲಿಯ ಹಂಪಿ ಕೇರಿ 4. ಕೈಕಿಣಿ ಕೆರೆಗದ್ದೆ 5. ಹಡಿಲ ಹರ್ಬಿಮಕ್ಕಿ ಕೋಣಾರ 6. ಹೊನ್ನಗದ್ದೆ 7. ಬೆಳಕಿ.

ಇನ್ನುಳಿದ 6 ಕಾಮಗಾರಿಗಳನ್ನು (1. ಮುಟ್ಟಳ್ಳಿ 2. ಬೈಲೂರ ಸಣ್ಣಓಲಸೆ ಮಾವಳ್ಳಿ ಭೂಮನ ಹಕ್ಕಲ 4. ಮಾರುಕೇರಿ ಕೋಟ ಖಂಡ 5. ಬೈಲೂರ ಮಾರ್ಕಂಡೇಶ್ವರ 6.ವೆಂಕಟಾಪುರ (ಐಸ್ ಫ್ಯಾಕ್ಟರಿ). ಅಧ್ಯತೆ ಮೇಲೆ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಅಧ್ಯಕ್ಷರು :— ಮಂಡಿಸಲಾಯಿತು.

2) ವರದಿಯನ್ನೊಪ್ಪಿಸುವುದು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಖಾತೆ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ನಾನು 1997ನೇ ಸಾಲಿನ ಕರ್ನಾಟಕ ಧರ್ಮಾದಾಯ ದತ್ತಿಗಳು ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ವಿಧೇಯಕದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :— ವರದಿಯನ್ನೊಪ್ಪಿಸಲಾಯಿತು.